ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಎ.ಪಿ.ಎಂ.ಸಿ ಎರಡನೇ ಗೇಟ್ ಮುಂಭಾಗ
ಮೊದಲನೇ ಮಹಡಿ, ಜಿ.ಪಿ.ಆರ್ ಬಿಲ್ಡಿಂಗ್,
ಎಂ.ಜಿ. ರಸ್ತೆ, ಚಿಕ್ಕಬಳ್ಳಾಪುರ-562101

96

ಕರ್ನಾಟಕ ಸರ್ಕಾರ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ.

CHIKKABALLAPURA URBAN DEVELOPMENT AUTHORITY.

ಎ.ಪಿ.ಎಂ.ಸಿ ಎರಡನೇ ಗೇಟ್ ಮುಂಭಾಗ, ಮೊದಲನೇ ಮಹಡಿ, ಜಿ.ಪಿ.ಆರ್.ಬಿಲ್ಡಿಂಗ್, ಎಂ.ಜಿ.ರಸ್ತೆ, ಚಿಕ್ಕಬಳ್ಳಾಪುರ-01

Email ID:cuda.cbpur@gmail.com ದೂರವಾಣಿ ಸಂಖ್ಯೆ:08156-274501.

ಸಂಖ್ಯೆ:ಚಿ.ನ.ಅ.ಪ್ರಾ/ವಿನ್ಯಾಸ/78/2022-23 /800 ದಿನಾಂಕ: 23 MAR 2023

"ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ"

(ವಿನ್ಯಾಸ ಅಭಿವೃದ್ಧಿಪಡಿಸಲು ಮಾತ್ರ)

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಅರಸನಹಳ್ಳಿ ಗ್ರಾಮದ ಸ.ನಂ.74/2 ರಲ್ಲಿ 02ಎಕರೆ-05ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:

1. ಅರ್ಜಿದಾರರ ಮನವಿ ದಿನಾಂಕ:25.11.2022.
2. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಎಲ್ಎನ್.ಎಸ್ಆರ್.(ಚಿ)ಸಕಾಲ.240/2014-15 ದಿನಾಂಕ:28.01.2015
3. ದಿನಾಂಕ:10.02.2023 ರಂದು ನಡೆದ ಪ್ರಾಧಿಕಾರದ 29ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 07 ರ ನಿರ್ಣಯ.
4. ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 24 ಶಾಸನ 2015 ಬೆಂಗಳೂರು ದಿನಾಂಕ:10.09.2015.
5. ಅರ್ಜಿದಾರರು ಶುಲ್ಕ ಪಾವತಿಸಿರುವ ದಿನಾಂಕ:13.03.2023 ಪ್ರಾಧಿಕಾರದ ರಶೀದಿ ಸಂಖ್ಯೆ:441 ಹಾಗೂ ದಿನಾಂಕ:17.03.2023.
6. ಅರ್ಜಿದಾರರು ಪ್ರಾಧಿಕಾರಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರ ದಿನಾಂಕ:14.02.2023.

****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ಶ್ರೀ ವೆಂಕಟೇಶ್ ಬಿನ್ ಲೇ॥ಎ.ಆರ್.ನಾರಾಯಣಸ್ವಾಮಿ ಮತ್ತು ಶ್ರೀ ರಮೇಶ್ ಬಿನ್ ಲೇ॥ಎ.ಆರ್.ನಾರಾಯಣಸ್ವಾಮಿ ಪರವಾಗಿ ಜಿಪಿಎದಾರರಾದ ಅದೃಷ್ಟ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಪಾಲುದಾರರಾದ ಶ್ರೀ ಪಿ.ರಾಮಕಿಶೋರ್ ರೆಡ್ಡಿ ಇವರು ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಅರಸನಹಳ್ಳಿ ಗ್ರಾಮದ ಸ.ನಂ.74/2 ರಲ್ಲಿ 02ಎಕರೆ-05ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಉಲ್ಲೇಖ(2) ರಂತೆ ಸದರಿ ಜಮೀನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಉಲ್ಲೇಖ(3) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಹಾಗೂ ಉಲ್ಲೇಖ(4) ರನ್ವಯ ಸದರಿ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

--2

ಉಲ್ಲೇಖ(5) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕ ಹಾಗೂ ಸೆಸ್‌ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಉಲ್ಲೇಖ(6) ರಲ್ಲಿ ಅರ್ಜಿದಾರರು ಸದರಿ ಜಮೀನಿನಲ್ಲಿ ಯಾವುದೇ ತಂಟೆ-ತಕರಾರು, ದೂರುಗಳು, ನ್ಯಾಯಲಯದಲ್ಲಿ ದಾವೆಗಳು, ಲೋಕಾಯುಕ್ತ ಪ್ರಕರಣಗಳು, ಡಿಕ್ರಿ ಇತರೆ ಯಾವುದೇ ಪ್ರಕರಣಗಳು ಇರುವುದಿಲ್ಲ ಪ್ರಮಾಣ ಪತ್ರವನ್ನು ದೃಢೀಕರಿಸಿ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ, ವಿನ್ಯಾಸ ನಕ್ಷೆಯ ಭೂ-ಉಪಯೋಗ ವಿಶ್ಲೇಷಣೆಯಲ್ಲಿ **ವಸತಿಗಾಗಿ 3624.79 ಚ.ಮೀ.(42.15%), ಉದ್ಯಾನವನ 860.25ಚ.ಮೀ.(10.00%) ಮತ್ತು ರಸ್ತೆಗಾಗಿ 4114.41ಚ.ಮೀ.(47.85%) ವಿಸ್ತೀರ್ಣಗಳೊಂದಿಗೆ 9.14ಮೀx12.19ಮೀ ಅಳತೆಯ 13 ನಿವೇಶನಗಳು, 9.14ಮೀxಅನಿಯತ ಅಳತೆಯ 05ನಿವೇಶನಗಳು, ಅನಿಯತ ಅಳತೆಯ 12 ನಿವೇಶನಗಳು ಒಟ್ಟು 30 ನಿವೇಶನಗಳನ್ನು** ಅಳವಡಿಸಿ ಸದರಿ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ.

ಷರತ್ತುಗಳು:

1. ಈಗ ನೀಡಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ಅನುಮೋದನೆಯ ದಿನಾಂಕದಿಂದ 2 ವರ್ಷಗಳೊಳಗೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. **ಪ್ರಾಧಿಕಾರವು ಅನುಮೋದಿಸಿದ ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಭೂ ಮಾಲೀಕರು/ಅರ್ಜಿದಾರರು/ ಅಭಿವೃದ್ಧಿದಾರರು ವಿನ್ಯಾಸದಲ್ಲಿರುವಂತೆ ರಸ್ತೆ ಮತ್ತು ಉದ್ಯಾನವನ ಜಾಗೆಗಳನ್ನು ಭೂಮಿಯ ಮೇಲೆ ಅಳವಡಿಸಿ ವಿನ್ಯಾಸ ನಕ್ಷೆಯನ್ನು ನಾಮಫಲಕದಲ್ಲಿ ಪ್ರಕಟಿಸಿ ರಸ್ತೆ ಹಾಗೂ ಉದ್ಯಾನವನ ಜಾಗೆಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುಪ್ಪಹಳ್ಳಿ ಗ್ರಾಮ ಪಂಚಾಯಿತಿ ಚಿಕ್ಕಬಳ್ಳಾಪುರ ಇವರಿಗೆ ಯಾವುದೇ ಫಲಾಪೇಕ್ಷೆಯಿಲ್ಲದೇ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯೇಜನ ಪತ್ರದ ಮೂಲಕ ಹಸ್ತಾಂತರಿಸತಕ್ಕದ್ದು.**
3. **ರಿಯಲ್ ಎಸ್ಟೇಟ್ (ವಿನಿಮಯ ಮತ್ತು ಅಭಿವೃದ್ಧಿ) ಅಧಿನಿಯಮ 2016 ರ (2016 ರ ಕೇಂದ್ರ ಅಧಿನಿಯಮ16) ಅಡಿಯಲ್ಲಿ ಯೋಜನೆಯನ್ನು ನೋಂದಾಯಿಸತಕ್ಕದ್ದು.**
4. ವಿನ್ಯಾಸದಲ್ಲಿ ಲಘು ವಿದ್ಯುತ್ ವಾಹಕ ತಂತಿಗಳು ಹಾದು ಹೋಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಸೂಕ್ತ ಜಾಗಕ್ಕೆ ಅಥವಾ ರಸ್ತೆ ಬದಿಗೆ ಸ್ಥಳಾಂತರಿಸತಕ್ಕದ್ದು ಹಾಗೂ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಈ ಕಛೇರಿಗೆ ಸಲ್ಲಿಸತಕ್ಕದ್ದು.
5. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
6. ವಿನ್ಯಾಸದ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳಸತಕ್ಕದ್ದು.
7. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
8. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

--3

94

9. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ರೀತಿ ನಿರ್ಬಂಧಿಸತಕ್ಕದ್ದಲ್ಲ.

10. ವಿನ್ಯಾಸ ಅಭಿವೃದ್ಧಿಪಡಿಸುವಾಗ ಉದ್ಯಾನವನ ಹಾಗೂ ರಸ್ತೆಗಾಗಿ ಕಾಯ್ದಿರಿಸಿರುವ ಜಾಗಗಳನ್ನು ಅನುಮೋದಿತ ವಿನ್ಯಾಸದಂತೆ ಅಭಿವೃದ್ಧಿಪಡಿಸಬೇಕು.

11. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಈ ಪ್ರಾಧಿಕಾರದ ನಕ್ಷೆ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

12. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ-ಮಾಲಿಕತ್ವ ದಾಖಲೆ ಮತ್ತು ಇತರೆ ಯಾವುದೇ ದಾಖಲೆ/ಮಾಹಿತಿಗಳು ಸುಳ್ಳಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇತಾನಾಗಿ ರದ್ದುಗೊಳ್ಳುತ್ತದೆ.

13. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot path) ನಿರ್ಮಿಸುವುದು.

14. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲಿನ ನೀರನ್ನು ಬಿಡಬಾರದು.

15. ವಿನ್ಯಾಸದಲ್ಲಿ ಕೊಳವೆ ಬಾವಿಗಳನ್ನು ನಿರ್ಮಿಸುವಾಗ ಸರ್ವೋಚ್ಚ ನ್ಯಾಯಾಲಯವು ದಿನಾಂಕ:06.07.2010 ರಂದು ನೀಡಿರುವ ಆದೇಶದನ್ವಯ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪ್ರಮಾಣ ಪತ್ರ ಪಡೆಯತಕ್ಕದ್ದು.

16. ವಿನ್ಯಾಸದ ಅನುಮೋದನೆಯಲ್ಲಿ ವಿಧಿಸಿರುವ ಯಾವುದೇ ಷರತ್ತುಗಳನ್ನು ಹಾಗೂ ಕಾಲಕಾಲಕ್ಕೆ ವಿಧಿಸುವ ಇತರೆ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.

17. ಸದರಿ ವಿನ್ಯಾಸದ ಸುತ್ತಲೂ ಕಾಪೌಂಡ್ ನಿರ್ಮಿಸಿ ಗೇಟ್‌ಅನ್ನು ಅಳವಡಿಸಿ ಗೇಟೆಡ್ ಕಮೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಚಾರಿ ಮಾರ್ಗ ಹಾಗೂ ಉದ್ಯಾನವನಗಳ ಸಾರ್ವಜನಿಕ ಸ್ವತ್ತಾಗಿರುತ್ತದೆ ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.

18. ತಾತ್ಕಾಲಿಕ ಅನುಮೋದಿಸಿದ ವಸತಿ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಂಡಿಗಳು ಮತ್ತು ಮಳೆ ನೀರು ಸಂಗ್ರಹಣೆಗಳನ್ನು ಗುರುತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯಲ್ಲಿ ಅಳವಡಿಸಿಕೊಳ್ಳತಕ್ಕದ್ದು ಹಾಗೂ ಅಂತರ್ಜಲವೃದ್ಧಿಗೆ ಅಗತ್ಯಕ್ರಮ ವಹಿಸುವುದು.

ವಿನ್ಯಾಸ ಅನುಮೋದನೆಯ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(4) ಮತ್ತು ಕಲಂ 73 ರಡಿಯಲ್ಲಿ ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ಗಮನಕ್ಕೆ ತರಲಾಗಿದೆ.

ಸಹಿ/-

ಆಯುಕ್ತರು(ಅ.ಪ್ರ)

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ

ಚಿಕ್ಕಬಳ್ಳಾಪುರ.

--4


93

ಯಥಾ ಪ್ರತಿಯನ್ನು:-

1. ಅರ್ಜಿದಾರರಾದ/ಅಭಿವೃದ್ಧಿದಾರರು ಶ್ರೀ ವೆಂಕಟೇಶ್ ಬಿನ್ ಲೇ॥ಎ.ಆರ್.ನಾರಾಯಣಸ್ವಾಮಿ ಮತ್ತು ಶ್ರೀ ರಮೇಶ್ ಬಿನ್ ಲೇ॥ಎ.ಆರ್.ನಾರಾಯಣಸ್ವಾಮಿ ಪರವಾಗಿ ಜಿಪಿಎದಾರರಾದ ಅದೃಷ್ಟ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಪಾಲುದಾರರಾದ ಶ್ರೀ ಪಿ.ರಾಮಕಿಶೋರ್ ರೆಡ್ಡಿ ಬಿನ್ ನಾಗಶ್ವರ್ ರೆಡ್ಡಿ, ನಂ.3, 2ನೇ ಮುಖ್ಯ ರಸ್ತೆ, ಸಂತೃಪ್ತಿ ನಗರ, 7ನೇ ಪೇಸ್, ಜೆ.ಪಿ.ನಗರ, ಬೆಂಗಳೂರು-78. ನಗರ ಇವರಿಗೆ ಮಾಹಿತಿಗಾಗಿ ನೀಡುತ್ತಾ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಮಾರ್ಗದರ್ಶನದಂತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳತಕ್ಕದ್ದು.
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸುತ್ತಾ ಸದರಿ ವಿನ್ಯಾಸದಲ್ಲಿ ಬರುವ ಸಿವಿಲ್ ಕಾಮಗಾರಿಗಳ ಬಗ್ಗೆ ಪ್ರಾರಂಭಿಕ ಹಂತದಲ್ಲಿಯೇ ಸ್ಥಳ ಪರಿಶೀಲಿಸಿ ಇಲಾಖೆಯ ಮಾರ್ಗದರ್ಶನದಂತೆ ಅಭಿವೃದ್ಧಿಪಡಿಸಿದ ನಂತರ ತೃಪ್ತಿಕರವಾಗಿದ್ದಲ್ಲಿ ದೃಢೀಕರಣ ಪತ್ರ ನೀಡುವಂತೆ ತಿಳಿಸಲಾಗಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಚಿಕ್ಕಬಳ್ಳಾಪುರ. ಇವರಿಗೆ ಕಳುಹಿಸುತ್ತಾ ಸದರಿ ವಿನ್ಯಾಸದಲ್ಲಿ ಬರುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಬಗ್ಗೆ ಪ್ರಾರಂಭಿಕ ಹಂತದಲ್ಲಿಯೇ ಸ್ಥಳ ಪರಿಶೀಲಿಸಿ ಇಲಾಖೆಯ ಮಾರ್ಗದರ್ಶನದಂತೆ ಅಭಿವೃದ್ಧಿಪಡಿಸಿದ ನಂತರ ತೃಪ್ತಿಕರವಾಗಿದ್ದಲ್ಲಿ ದೃಢೀಕರಣ ಪತ್ರ ನೀಡುವಂತೆ ತಿಳಿಸಲಾಗಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್), ಗ್ರಾಮೀಣ/ನಗರ ಉಪವಿಭಾಗ, ಬೆಸ್ಕಾಂ, ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸುತ್ತಾ ಸದರಿ ವಿನ್ಯಾಸದಲ್ಲಿ ಬರುವ ವಿದ್ಯುತ್ ಸರಬರಾಜು ಕಾಮಗಾರಿಗಳ ಬಗ್ಗೆ ಇಲಾಖೆಯ ಮಾರ್ಗದರ್ಶನದಂತೆ ಪ್ರಾರಂಭಿಕ ಹಂತದಲ್ಲಿಯೇ ಸ್ಥಳ ಪರಿಶೀಲಿಸಿ ಮಾರ್ಗದರ್ಶನ ನೀಡಿ ಅಭಿವೃದ್ಧಿಪಡಿಸಿದ ನಂತರ ತೃಪ್ತಿಕರವಾಗಿದ್ದಲ್ಲಿ ದೃಢೀಕರಣ ಪತ್ರ ನೀಡುವಂತೆ ತಿಳಿಸಲಾಗಿದೆ.
5. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸುತ್ತಾ ಸದರಿ ವಿನ್ಯಾಸದಲ್ಲಿ ಬರುವ ಉದ್ಯಾನವನ ಮತ್ತು ರಸ್ತೆ ಬದಿಗಳಲ್ಲಿ ಸಸಿಗಳನ್ನು ಬೆಳೆಸುವ ಬಗ್ಗೆ ಪ್ರಾರಂಭಿಕ ಹಂತದಲ್ಲಿಯೇ ಸ್ಥಳ ಪರಿಶೀಲಿಸಿ ಮಾರ್ಗದರ್ಶನ ನೀಡಿ ಅಭಿವೃದ್ಧಿಪಡಿಸಿದ ನಂತರ ತೃಪ್ತಿಕರವಾಗಿದ್ದಲ್ಲಿ ದೃಢೀಕರಣ ಪತ್ರ ನೀಡುವಂತೆ ತಿಳಿಸಲಾಗಿದೆ.
6. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುಪ್ಪಹಳ್ಳಿ ಗ್ರಾಮ ಪಂಚಾಯಿತಿ ಚಿಕ್ಕಬಳ್ಳಾಪುರ ತಾಲ್ಲೂಕು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಕಛೇರಿ ಕಡತಕ್ಕೆ.

23/3/23


ಆಯುಕ್ತರು(ಅ.ಪ್ರ)
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಬಳ್ಳಾಪುರ.



ಸೂಚನೆ:–

1. ಜಿಲ್ಲಾದಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎ.ಎಲೆನ್.ಎಸ್.ಆರ್(ಚ)ಸಕಾಲ.240/2014–15 ರಲ್ಲಿ ವಸತಿ ಉದ್ದೇಶಕ್ಕೆ ಭೂಪರಿವರ್ತನೆಯಾಗಿದೆ.
2. ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿರುವ ಸರ್ವೆ ನಕ್ಷೆಗೆ ಅನುಗುಣವಾಗಿ ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿದೆ. ಸದರಿ ಸರ್ವೆ ನಕ್ಷೆಯಲ್ಲಿನ ನ್ಯೂನತೆಗಳಿಗೆ ಈ ಇಲಾಖೆಯು ಯಾವುದೇ ಜವಾಬ್ದಾರಿ ಇರುವುದಿಲ್ಲ.
3. ಸದರಿ ಜಮೀನು ಯಾವುದೇ ತಂಟೆ ತಕರಾರುಗಳಿಗೆ ಅರ್ಜಿದಾರರೇ ಹೊಣೆಗಾರರಾಗಿದ್ದು, ಈ ಇಲಾಖೆಗೆ ಯಾವುದೇ ರೀತಿಯ ಜವಾಬ್ದಾರಿಯಾಗಿರುವುದಿಲ್ಲ.

ಸ್ಥಳಸೂಚಿ ನಕ್ಷೆ(ಮಾಪನಕ್ಕಿಲ್ಲ)



document is

ಪ್ರಸ್ತಾವಿತ ಪ್ರದೇಶದ ಒಟ್ಟು ವಿಸ್ತೀರ್ಣ – 8599.45 ಚ.ಮೀ ಅಥವಾ 2ಎಕರೆ–05ಗುಂಟೆ
ಖರಾಬು ವಿಸ್ತೀರ್ಣ – 00000 ಚ.ಮೀ ಅಥವಾ 0ಎಕರೆ–00ಗುಂಟೆ
ಅನ್ಯಕ್ರಾಂತ ವಿಸ್ತೀರ್ಣ – 8599.45 ಚ.ಮೀ ಅಥವಾ 2ಎಕರೆ–05ಗುಂಟೆ
ಲಭ್ಯವಿರುವ ವಿಸ್ತೀರ್ಣ– 8599.45 ಚ.ಮೀ ಅಥವಾ 2ಎಕರೆ–05ಗುಂಟೆ

ಭೂ–ಉಪಯೋಗ ವಿಶ್ಲೇಷಣೆ

ಕ್ರ.ಸಂ.	ಭೂ–ಉಪಯೋಗ	ವಿಸ್ತೀರ್ಣ(ಚ.ಮೀ)	ಶೇಕಡ (%)
01	ವಸತಿ	3624.79	42.15
02	ಉದ್ಯಾನವನ	860.25	10.00
03	ರಸ್ತೆ	4114.41	47.85
	ಒಟ್ಟು	8599.45	100.00

ನಿವೇಶನದ ವಿವರ

ಕ್ರ.ಸಂ.	ನಿವೇಶನದ ಅಳತೆ	ನಿವೇಶನಗಳ ಸಂಖ್ಯೆ
01	9.14ಮೀ x 12.19ಮೀ	13
02	9.14ಮೀ x ಅನಿಯತ	05
03	ಅನಿಯತ (ಅ)	12
	ಒಟ್ಟು	30

ಈ ಪಾಧಿಕಾರದ ಪತ್ರ ಸಂಖ್ಯೆ:ಚಿನಅಪಾ:ಚಿಬ:ವಿನ್ಯಾಸ:78/2022–23 ದಿನಾಂಕ:23–3–2023ರಲ್ಲಿ ನಮೂದಿಸಿದ ನಿಬಂಧನೆಗಳಿಗೆ ಒಳಪಟ್ಟು ಈ ವಿನ್ಯಾಸ ನಕ್ಷೆಯನ್ನು ಅನುಮೋದಿಸಿದೆ

ಕರ್ನಾಟಕ ಸರ್ಕಾರ
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ.

"ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಸ್ಥಳದಲ್ಲಿ ಅಭಿವೃದ್ಧಿಪಡಿಸಲು ಮಾತ್ರ"

23/03/2023
ನಗರ ಯೋಜಕ ಸದಸ್ಯರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ

23/3/23
ಆಯುಕ್ತರು(ಅ.ಪ್ರ)
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ

ವಿಷಯ:		
	ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ ಹೋಬಳಿ ಅರಸನಹಳ್ಳಿ ಗ್ರಾಮದ ಸ.ನಂ.74/2 ರಲ್ಲಿ 2ಎಕರೆ–05ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಉದ್ದೇಶಕ್ಕೆ ರಚಿಸಲಾದ ಬಹುನಿವೇಶನ ವಿನ್ಯಾಸ ನಕ್ಷೆ.	ಅಳತೆ:–1:800
	ಅರ್ಜಿದಾರರು: 1. ಶ್ರೀ ಎನ್ ವೆಂಕಟೇಶ್ ಬಿನ್ ಲೇಟ್ ಎ.ಆರ್.ನಾರಾಯಣಸ್ವಾಮಿ 2. ಶ್ರೀ ರಮೇಶ್.ಎನ್ ಬಿನ್ ಲೇಟ್ ಎ.ಆರ್.ನಾರಾಯಣಸ್ವಾಮಿ ರವರ ಪರವಾಗಿ ಜೆ.ಪಿ.ಎದಾರರಾದ ಅದ್ವಿಷ್ಟ ಬಿಲ್ಡರ್ಸ್ ಅಂಡ್ ಡೆವೆಲಪರ್ಸ್ ಪಾಲುದಾರರಾದ ಪಿ.ರಾಮಕಿಶೋರ್ ರೆಡ್ಡಿ	ನಕ್ಷೆ ಸಂಖ್ಯೆ: 78/22–23